RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ– IV-A | ಬೆಂಗಳೂರು, ಶುಕ್ರವಾರ, ಜುಲೈ ೩೧, ೨೦೧೫ (ಶ್ರಾವಣ ೦೯, ಶಕ ವರ್ಷ ೧೯೩೭) | ನಂ. ೮೯೧ |
|---|---|---|
| Part– IV-A | Bengaluru, Friday, July 31, 2015 (Shravana 09, Shaka Varsha 1937) | No. 891 |


ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 22 ಎಲ್‌ಎಂಡಬ್ಲ್ಯೂ 2014, ಬೆಂಗಳೂರು, ದಿನಾಂಕ: 30–07–2015

ಕರ್ನಾಟಕ ರಾಜ್ಯಾದ್ಯಂತ "ವಿನೀರ್" ಉದ್ದಿಮೆಗಳಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪತ್ರದ ಭಾಗ–4ಎ ರಲ್ಲಿ ದಿನಾಂಕ:30–10–2014 ರಂದು ಪ್ರಕಟಿಸಿ 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರದ ಕಾಯ್ದೆ ಸಂಖ್ಯೆ: XI) ಕಲಂ 5ರ ಉಪಕಲಂ 1ರ (ಬಿ) ಖಂಡದ ಮೇರೆಗೆ ಬಾಧಿತರಾಗುವ/ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ / ಆಕ್ಷೇಪಣೆಗಳನ್ನು ಸ್ವೀಕರಿಸಲು ಎರಡು ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅವರಿಂದ ಯಾವುದೇ ಸಲಹೆ / ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ನಂತರ, ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು. ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಗಣನೆಗೆ ತಗದುಕೊಂಡು, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ನಿಯಮ ಸಂಖ್ಯೆ: XI) ಕಲಂ 3ರ ಉಪಕಲಂ (1)ರ (ಬಿ) ಖಂಡ ಹಾಗೂ ಕಲಂ 5ರ ಉಪಕಲಂ (1)ನೇ (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಕರ್ನಾಟಕ ರಾಜ್ಯಾದ್ಯಂತ "ವಿನೀರ್" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ: 01–04–2015 ರಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

ಅನುಸೂಚಿ

| ಕ್ರ. ಸಂ | ಕೆಲಸದ ವರ್ಗಗಳು | ವಲಯ – 1 | | ವಲಯ –2 | | ವಲಯ – 3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| 1 | ಯಾರ್ಡ್ ವಿಭಾಗ: | | | | | | |
| | ಅ)ನಾಟಗಳನ್ನು ಕೊಯ್ದು ತುಂಡು ಮಾಡುವುದು | 414–00 | 10764–00 | 402–00 | 10452–00 | 376–00 | 9776–00 |
| | ಆ)ನಾಟಗಳ ತುಂಡುಗಳನ್ನು ಸಾಗಿಸುವುದು | 385–00 | 10010–00 | 375–00 | 90750–00 | 350–00 | 9100–00 |
| 2 | ಫೀಲಿಂಗ್ ವಿಭಾಗ: | | | | | | |
| | ಅ)ಪೀಲಿಂಗ್ ಮೆಷಿನ್ ಆಪರೇಟರ್ | 403–00 | 10478–00 | 393–00 | 10218–00 | 367–00 | 9542–00 |
| | ಆ)ಪೀಲಿಂಗ್ ಮೆಷಿನ್ ಸಹಾಯಕ ಆಪರೇಟರ್ | 397–00 | 10322–00 | 387–00 | 10062–00 | 361–00 | 9386–00 |
| | ಇ)ಪೀಲಿಂಗ್ ಮೆಷಿನ್ ಸಹಾಯಕ<br>ಈ)ಪೀಲಿಂಗ್ ಮೆಷಿನ್ ಹೆಲ್ಪರ್<br>ಉ)ರೀಲಿಂಗ್ ಮೆಷಿನ್ ಆಪರೇಟರ್<br>ಊ)ರೀಲಿಂಗ್ ಮಷಿನ್ ಹೆಲ್ಪರ್<br>ಋ)ಕ್ಯರಿಯರ್ | 385–00 | 10010–00 | 375–00 | 9750–00 | 350–00 | 9100–00 |

| ಕ್ರ ಸಂ | ಕೆಲಸದ ವರ್ಗಗಳು | ವಲಯ – 1 | | ವಲಯ –2 | | ವಲಯ – 3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| 3 | ಡ್ರಾಯಿಂಗ್ ವಿಭಾಗ | | | | | | |
| | ಅ)ಡ್ರಾಯರ್ ಆಪರೇಟರ್ | 413–00 | 10738–00 | 402–00 | 10452–00 | 376–00 | 9776–00 |
| | ಆ)ಡ್ರಾಯರ್ ಫೀಡಿಂಗ್ ಮನ್ | 400–00 | 10400–00 | 390–00 | 10140–00 | 364–00 | 9464–00 |
| 4 | ಕ್ಲೈ ಪಿಂಗ್ ವಿಭಾಗ<br>ಅ)ಡೆಕೋರೇಟಿವ್ ಕ್ಲೈಪಿಂಗ್ ಆಪರೇಟರ್ | 430–00 | 11180–00 | 420–00 | 10920–00 | 391–00 | 10166–00 |
| | ಆ)ಸಹಾಯಕ ಕ್ಲೈಪಿಂಗ್ ಆಪರೇಟರ್ | 400–00 | 10400–00 | 390–00 | 10140–00 | 364–00 | 9464–00 |
| | ಇ)ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| 5 | ಸಾರ್ಟಿಂಗ್ ವಿಭಾಗ<br>ಅ)ಸಾರ್ಟರ್ | 400–00 | 10400–00 | 390–00 | 10140–00 | 364–00 | 9464–00 |
| 6 | ಗುಲೇಟಿಂಗ್ ಕಟ್ಟರ್<br>ಅ)ಗುಲೇಟಿಂಗ್ ಕಟ್ಟರ್ | 430–00 | 11180–00 | 420–00 | 10920–00 | 391–00 | 10166–00 |
| | ಆ)ಸ್ಲೀಸಿಂಗ್ ಮನ್ | 400–00 | 10400–00 | 390–00 | 10140–00 | 364–00 | 9464–00 |
| | ಇ)ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| 7 | ಬಾಯ್ಲರ್ ವಿಭಾಗ<br>ಅ)ಸೀನಿಯರ್ ಬಾಯ್ಲರ್ ಅಟೆಂಡೆಂಟ್ | 420–00 | 10920–00 | 408–00 | 10608–00 | 381–00 | 9906–00 |
| | ಆ)ಬಾಯ್ಲರ್ ಅಟೆಂಡೆಂಟ್ | 413–00 | 10738–00 | 402–00 | 10452–00 | 375–00 | 9750–00 |
| | ಇ)ಬಾಯ್ಲರ್ ಪೈರ್ ಮನ್ | 400–00 | 10400–00 | 390–00 | 10140–00 | 364–00 | 9464–00 |
| 8 | ಬ್ಲೀಚಿಂಗ್ ವಿಭಾಗ<br>ಅ)ಬೀಂಡಸಾ ಆಪರೇಟರ್<br>ಆ)ಸ್ಟ್ಯಾಗಿಂಗ್ ಮ್ಯಾನ್ | 420–00 | 10920–00 | 408–00 | 10608–00 | 381–00 | 9906–00 |
| | ಇ)ಸಹಾಯಕರು<br>ಈ)ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| | ಉ)ಬಾಯ್ಲಿಂಗ್ ವ್ಯಾಟ್ ಅಟೆಂಡರ್<br>ಊ)ಎಲೆಕ್ಟ್ರಿಕ್ ಹಾಯಿಸ್ಟ್ ಆಪರೇಟರ್ | 400–00 | 10400–00 | 390–00 | 10140–00 | 373–00 | 9698–00 |
| 9 | ಸ್ಲೈಸರ್ ವಿಭಾಗ<br>ಅ)ಸ್ಲೈಸರ್ ಆಪರೇಟರ್<br>ಆ)ಸಹಾಯಕ ಸ್ಲೈಸರ್ ಆಪರೇಟರ್ | 437–00 | 11362–00 | 425–00 | 11050–00 | 397–00 | 10322–00 |
| | ಇ) ಬ್ಲೇಡ್ ಶಾರ್ಪರ್ | 430–00 | 11180–00 | 420–00 | 10920–00 | 391–00 | 10166–00 |
| | ಈ) ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| 10 | ಮೆಷಿನ್ ಶಾಫ್<br>ಅ)ಟರ್ನರ್<br>ಆ)ಫಿಟ್ಟರ್<br>ಇ)ವೆಲ್ಡರ್<br>ಈ)ಗ್ಯಾಸ್ ಕಟ್ಟಿಂಗ್ | 430–00 | 11180–00 | 420–00 | 10920–00 | 391–00 | 10166–00 |
| | ಉ)ಕಾರ್ಪೆಂಟರ್<br>ಊ) ನೀರಿನ ಪಂಪ್ ಆಪರೇಟರ್ | 400–0 | 10400–00 | 390–00 | 10140–00 | 364–00 | 9464–00 |
| | ಋ) ಹೆಲ್ಪರ್ | 385–00 | 10010–00 | 375–00 | 9750–00 | 350–00 | 9100–00 |
| 11 | ಸಿಬ್ಬಂದಿ ಮತ್ತು ಆಡಳಿತ | | | | | | |
| 1. | ಫಾರೆಸ್ಟ್ ಸೂಪರ್ ವೈಸರ್ | 476–00 | 12376–00 | 464–00 | 12064–00 | 433–00 | 11258–00 |
| 2. | ಜೂನಿಯರ್ ಫಾರೆಸ್ಟ್ ಸೂಪರ್ವೈಸರ್ | 467–00 | 12142–00 | 455–00 | 11830–00 | 424–00 | 11024–00 |
| 3. | ಸೀನಿಯರ್ ಕ್ಲರ್ಕ/ ಕ್ಲರ್ಕ<br>(ಪದವೀಧರ)/ಟೈಂ ಕೀಪರ್/ | 458–00 | 11908–00 | 446–00 | 11596–00 | 416–00 | 10816–00 |
| 4. | ಜೂನಿಯರ್ ಕ್ಲರ್ಕ<br>(ಪದವೀಧರರಲ್ಲದವರು) | 442–00 | 11492–00 | 431–00 | 11206–00 | 402–00 | 10452–00 |
| 5. | ಗೆಸ್ಟ್ ಹೌಸ್ ಕುಕ್ | 430–00 | 11180–00 | 420–00 | 10920–00 | 391–00 | 10166–00 |

| ಕ್ರ ಸಂ | ಕೆಲಸದ ವರ್ಗಗಳು | ವಲಯ – 1 | | ವಲಯ –2 | | ವಲಯ – 3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| | ಚಾಲಕರು /ಕ್ಲೀನರ್ಸ್ (ಡ್ರೈವರ್/ ಕ್ಲೀನರ್ಸ್) | | | | | | |
| 1. | ಲಾರಿ ಡ್ರೈವರ್ | 449–00 | 11674–00 | 437–00 | 11362–00 | 407–00 | 10582–00 |
| 2. | ಕಾರ್/ಜೀಪ್ ಡ್ರೈವರ್ | 421–00 | 10946–00 | 410–00 | 10660–00 | 383–00 | 9958–00 |
| 3. | ಲಾರಿ/ಕಾರ್/ಜೀಪ್ ಕ್ಲೀನರ್ | 385–00 | 10010–00 | 375–00 | 9750–00 | 350–00 | 9100–00 |
| | ಕಛೇರಿ ಸಿಬ್ಬಂದಿ | | | | | | |
| 1. | ಮ್ಯಾನೇಜರ್/ ಪರ್ಸನಲ್ ಆಫೀಸರ್ | 511–00 | 13286–00 | 497–00 | 12922–00 | 464–00 | 12064–00 |
| 2. | ಅಸಿಸ್ಟೆಂಟ್ ಮ್ಯಾನೇಜರ್/ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 494–00 | 12844–00 | 481–00 | 12506–00 | 449–00 | 11674–00 |
| 3. | ಅಕೌಂಟೆಂಟ್ | 476–00 | 12376–00 | 464–00 | 12064–00 | 433–00 | 11258–00 |
| 4. | ಕ್ಯಾಷಿಯರ್ | 467–00 | 12142–00 | 455–00 | 11830–00 | 425–00 | 11050–00 |
| 5. | ಶೀಘ್ರಲಿಪಿಗಾರ/ಕಂಪ್ಯೂಟರ್ ಆಪರೇಟರ್ | | | | | | |
| 6. | ಸ್ಟೋರ್ ಕೀಪರ್ | | | | | | |
| 7. | ಬೆರಳಚ್ಚುಗಾರ/ಡಾಟಾ ಎಂಟ್ರೀ ಆಪರೇಟರ್/ ಟೈಪಿಸ್ಟ್ | 458–00 | 11908–00 | 446–00 | 11596–00 | 416–00 | 10816–00 |
| 8. | ಗುಮಾಸ್ತ/ಕ್ಲರ್ಕ | | | | | | |
| 9. | ಆಫೀಸ್‌ಬಾಯ್/ಪ್ಯೂನ್/ವಾಚಮನ್ / ಅಟೆಂಡರ್/ಸ್ವೀಪರ್ | 385–00 | 10010–00 | 375–00 | 9750–00 | 350–00 | 9100–00 |

ತುಟ್ಟಿಭತ್ಯೆ:.

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 6205 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 6205 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:.

ಅ) **ಮಾಸಿಕ ವೇತನವನ್ನು ಪಡೆಯುವವರು:.** ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು X ತುಟ್ಟಿಭತ್ಯೆಯ ದರ X 30 ದಿನಗಳು= ತಿಂಗಳ ತುಟ್ಟಿಭತ್ಯೆ

ಆ) **ದಿನಗೂಲಿ ವೇತನ ಪಡೆಯುವವರು :.**

$$\frac{\text{ಪ್ರತಿ ವರ್ಷ ಹೆಚ್ಚಾಗುವ ಅಂಶಗಳು X ತುಟ್ಟಿಭತ್ಯೆಯ ದರ X 30}}{26} = \text{ದಿನದ ತುಟ್ಟಿಭತ್ಯೆ}$$

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ವೇತನ ದರಗಳನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು ಹಾಗೂ ಕಡ್ಡಾಯವಾಗಿ ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಸಹ ಪಾವತಿಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಅವರ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.
9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
10. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.
11. ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಆಯಾ ಅಂಕಣಗಳಲ್ಲಿಯೇ ನಮೂದಿಸಿ ಪಾವತಿ ಮಾಡತಕ್ಕದ್ದು.
12. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿ ಕೊಂಡು ಹೋಗಬಲ್ಲವರಾಗಿರಬೇಕು.
13. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ. ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.
14. **ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.
15. **ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಯಾವುದೇ ಯಂತ್ರಗಳನ್ನು ನಡೆಸಲು ನೇಮಿಸಿದ್ದ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಾರದು. ಕಾವಲುಗಾರ, ಸಿಪಾಯಿ, ಚೌಕೀದಾರ, ಕಸ ಗುಡಿಸುವವರು, ಜಾಡಮಾಲಿ ಹಾಗೂ ಅದೇ ತರಹದ ಕೆಲಸ ಮಾಡುವ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಹುದು.

ವಲಯ.1: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು

ವಲಯ.2: ವಲಯ.1ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು.

ವಲಯ.3: ವಲಯ.1 ಮತ್ತು ವಲಯ.2ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು.

ಈ. ವಿಜಯಲಕ್ಷ್ಮಿ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕಾರ್ಮಿಕ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ8) (200 ಪ್ರತಿಗಳು)

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ- IV-A | ಬೆಂಗಳೂರು, ಶುಕ್ರವಾರ, ಜುಲೈ ೩೧, ೨೦೧೫ (ಶ್ರಾವಣ ೦೯, ಶಕ ವರ್ಷ ೧೯೩೭) | ನಂ. ೮೮೮ |
|---|---|---|
| Part- IV-A | Bengaluru, Friday, July 31, 2015 (Shravana 09, Shaka Varsha 1937) | No. 888 |


ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 27 ಎಲ್ಎಂಡಬ್ಲ್ಯೂ 2014, ಬೆಂಗಳೂರು, ದಿನಾಂಕ:30-07-2015

ಕರ್ನಾಟಕ ರಾಜ್ಯಾದ್ಯಂತ **"ಆಟೋಮೋಬೈಲ್ ಇಂಜನಿಯರಿಂಗ್ (ಸರ್ವಿಸಿಂಗ್ ಮತ್ತು ರಿಪೇರಿಂಗ್ ಸೇರಿ)"** ಉದ್ದಿಮೆಗಳಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯಪತ್ರದ ಭಾಗ-4ಎ ರಲ್ಲಿ ದಿನಾಂಕ:30-10-2014 ರಂದು ಪ್ರಕಟಿಸಿ 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರದ ಕಾಯ್ದೆ ಸಂಖ್ಯೆ: XI) ಕಲಂ 5ರ ಉಪಕಲಂ 1ರ (ಬಿ) ಖಂಡದ ಮೇರೆಗೆ ಬಾಧಿತರಾಗುವ / ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ / ಆಕ್ಷೇಪಣೆಗಳನ್ನು ಸ್ವೀಕರಿಸಲು ಎರಡು ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಅವರಿಂದ ಯಾವುದೇ ಸಲಹೆ / ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ನಂತರ, ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು. ಸದರಿ ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯನ್ನು ಸುಧೀರ್ಘವಾಗಿ ಸಮಾಲೋಚಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಮಂಡಳಿಯು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಗಣನೆಗೆ ತಗದುಕೊಂಡು, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ನಿಯಮ ಸಂಖ್ಯೆ: XI) ಕಲಂ 3ರ ಉಪಕಲಂ (1)ರ (ಬಿ) ಖಂಡ ಹಾಗೂ ಕಲಂ 5ರ ಉಪಕಲಂ (1)ನೇ (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಕರ್ನಾಟಕ ರಾಜ್ಯಾದ್ಯಂತ **"ಆಟೋಮೋಬೈಲ್ ಇಂಜನಿಯರಿಂಗ್ (ಸರ್ವಿಸಿಂಗ್ ಮತ್ತು ರಿಪೇರಿಂಗ್ ಸೇರಿ)"** ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ:01-04-2015ರಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

ಅನುಸೂಚಿ

| | | ವಲಯ -1 | | ವಲಯ-2 | | ವಲಯ-3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| I | ಅತಿ ಕುಶಲ ಕಾರ್ಮಿಕರು | | | | | | |
| 1. | ಫೋರ್ ಮನ್ | 476-00 | 12376-00 | 464-00 | 12064-00 | 433-00 | 11258-00 |
| 2. | ಸೂಪರ್ ವೈಸರ್/ ಸಹಾಯಕ ಫೋರ್ ಮನ್ | 458-00 | 11908-00 | 446-00 | 11596-00 | 416-00 | 10816-00 |

| | | ವಲಯ -1 | | ವಲಯ-2 | | ವಲಯ-3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| **II** | ಕುಶಲ ಕಾರ್ಮಿಕರು | | | | | | |
| 1. | ಟರ್ನರ್ | | | | | | |
| 2. | ಫಿಟ್ಟರ್ | | | | | | |
| 3. | ಮೆಕ್ಯಾನಿಕ್ | | | | | | |
| 4. | ವೆಲ್ಡರ್ | | | | | | |
| 5. | ಎಲೆಕ್ಟ್ರಿಷಿಯನ್ | | | | | | |
| 6. | ಟೈಂ ಕೀಪರ್ | 437–00 | 11362–00 | 426–00 | 11076–00 | 397–00 | 10322–00 |
| 7. | ಕಾರ್ಪೆಂಟರ್ | | | | | | |
| 8. | ಪೇಯಿಂಟರ್ | | | | | | |
| 9. | ಬ್ಲಾಕ್ ಸ್ಮಿತ್ | | | | | | |
| 10. | ಟಿನ್ ಸ್ಮಿತ್ | | | | | | |
| 11. | ಅಪೋಲ್ಸರಿಮೆನ್ | | | | | | |
| 12. | ಮೆಕ್ಯಾನಿಸ್ಟ್ | | | | | | |
| 13. | ವಲ್ಕನೈಸರ್ | | | | | | |
| 14. | ಇತರೆ ಕುಶಲ ಕಾರ್ಮಿಕರು | | | | | | |
| **III** | ಅರೆ ಕುಶಲ ಕಾರ್ಮಿಕರು | | | | | | |
| 1. | ಸಹಾಯಕ ಫಿಟ್ಟರ್ | | | | | | |
| 2. | ಸಹಾಯಕ ಎಲೆಕ್ಟ್ರೀಷಿಯನ್ | | | | | | |
| 3. | ಸಹಾಯಕ ಬ್ಲಾಕ್ ಸ್ಮಿತ್ | | | | | | |
| 4. | ಸಹಾಯಕ ವೆಲ್ಡರ್ | | | | | | |
| 5. | ಸಹಾಯಕ ಕಾರ್ಪೆಂಟರ್ | | | | | | |
| 6. | ಸಹಾಯಕ ಟರ್ನರ್ | | | | | | |
| 7. | ಸಹಾಯಕ ಗ್ರೀನರ್ | | | | | | |
| 8. | ಸಹಾಯಕ ಆಯಿಲ್ ಮೆನ್ | 423–00 | 10998–00 | 412–00 | 10712–00 | 385–00 | 10010–00 |
| 9. | ಸಹಾಯಕ ಪೇಯಿಂಟರ್ | | | | | | |
| 10. | ಸೇಲ್ಸ್ ಮೆನ್ | | | | | | |
| 11. | ಸಹಾಯಕ ಮೆಕ್ಯಾನಿಸ್ಟ್ | | | | | | |
| 12. | ಲರ್ನರ್ಸ್ ಅಥವಾ ಅಪ್ರೆಂಟೀಸ್ | | | | | | |
| 13. | ಸಹಾಯಕ ಟಿಂಕರ್ | | | | | | |
| 14. | ಟೈರ್ ಫಿಟ್ಟರ್ | | | | | | |
| 15. | ಇತರೆ ಅರೆ–ಕುಶಲ ಕಾರ್ಮಿಕರು | | | | | | |
| **IV.** | ಕುಶಲರಲ್ಲದ ಕಾರ್ಮಿಕರು | | | | | | |
| 1. | ಕ್ಲೀನರ್/ಹೆಲ್ಪರ್ | | | | | | |
| 2. | ಸ್ವೀಪರ್/ ಅಟೆಂಡರ್ | 385–00 | 10010–00 | 375–00 | 9750–00 | 350–00 | 9100–00 |
| 3. | ಕುಶಲರಲ್ಲದ ಇತರೇ ಕಾರ್ಮಿಕರು | | | | | | |
| **V.** | ಡ್ರೈವರ್ಸ್ | | | | | | |
| 1. | ಲಾರಿ ಡ್ರೈವರ್ | 449–00 | 11674–00 | 437–00 | 11362–00 | 408–00 | 10608–00 |
| 2. | ಕಾರ್/ಜೀಪ್ ಡ್ರೈವರ್ | 421–00 | 10946–00 | 410–00 | 10660–00 | 383–00 | 9958–00 |
| 3. | ಲಾರಿ/ಕಾರ್/ಜೀಪ್ ಕ್ಲೀನರ್ | 385–00 | 10010–00 | 375–00 | 9750–00 | 350–00 | 9100–00 |

| | | ವಲಯ -1 | | ವಲಯ-2 | | ವಲಯ-3 | |
|---|---|---|---|---|---|---|---|
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| 1. | ಮ್ಯಾನೇಜರ್/ ಪರ್ಸನಲ್ ಆಫೀಸರ್ | 511-00 | 13286-00 | 497-00 | 12922-00 | 464-00 | 12064-00 |
| 2. | ಅಸಿಸ್ಟೆಂಟ್ ಮ್ಯಾನೇಜರ್/ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 494-00 | 12844-00 | 481-00 | 12506-00 | 449-00 | 11674-00 |
| 3. | ಅಕೌಟೆಂಟ್ | 476-00 | 12376-00 | 464-00 | 12064-00 | 433-00 | 11258-00 |
| 4. | ಕ್ಯಾಷಿಯರ್/ಸೀನಿಯರ್ ಕ್ಲರ್ಕ್ | 467-00 | 12142-00 | 455-00 | 11830-00 | 425-00 | 11050-00 |
| 5. | ಶೀಘ್ರಲಿಪಿಗಾರ/ಕಂಪ್ಯೂಟರ್ ಆಪರೇಟರ್ | | | | | | |
| 6. | ಸ್ಟೋರ್ ಕೀಪರ್/ ಟೆಲಿಫೋನ್ ಸಹಾಯಕ | | | | | | |
| 7. | ಬೆರಳಚ್ಚುಗಾರ/ಡಾಟಾ ಎಂಟ್ರೀ ಆಪರೇಟರ್ | 458-00 | 11908-00 | 446-00 | 11596-00 | 416-00 | 10816-00 |
| 8. | ಗುಮಾಸ್ತ/ ಜೂನಿಯರ್ ಕ್ಲರ್ಕ್ | | | | | | |
| 9. | ಆಫೀಸ್‌ಬಾಯ್/ಪ್ಯೂನ್/ ವಾಚಮನ್/ ಸ್ವೀಪರ್ ಅಟೆಂಡರ್. | 385-00 | 10010-00 | 375-00 | 9750-00 | 350-00 | 9100-00 |

ತುಟ್ಟಿಭತ್ಯೆ:-

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960-100) 6205 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 6205 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ಪಾವತಿಸತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) **ಮಾಸಿಕ ವೇತನವನ್ನು ಪಡೆಯುವವರು:-** ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು X ತುಟ್ಟಿಭತ್ಯೆಯ ದರ X 30 ದಿನಗಳು= ತಿಂಗಳ ತುಟ್ಟಿಭತ್ಯೆ

ಆ) **ದಿನಗೂಲಿ ವೇತನ ಪಡೆಯುವವರು :-**

<u>ಪ್ರತಿ ವರ್ಷ ಹೆಚ್ಚಾಗುವ ಅಂಶಗಳು X ತುಟ್ಟಿಭತ್ಯೆಯ ದರ X 30</u> = ದಿನದ ತುಟ್ಟಿಭತ್ಯೆ
26

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು
3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ವೇತನ ದರಗಳನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು ಹಾಗೂ ಕಡ್ಡಾಯವಾಗಿ ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಸಹ ಪಾವತಿಸತಕ್ಕದ್ದು.
4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು

ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಅವರ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

10. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಆಯಾ ಅಂಕಣಗಳಲ್ಲಿಯೇ ನಮೂದಿಸಿ ಪಾವತಿ ಮಾಡತಕ್ಕದ್ದು.

12. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

13. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

14. **ಅರೆ ಕುಶಲ** : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

15. **ಕುಶಲರಲ್ಲದವರು** : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಯಾವುದೇ ಯಂತ್ರಗಳನ್ನು ನಡೆಸಲು ನೇಮಿಸಿದ್ದ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಾರದು. ಕಾವಲುಗಾರ, ಸಿಪಾಯಿ, ಚೌಕೀದಾರ, ಕಸ ಗುಡಿಸುವವರು, ಜಾಡಮಾಲಿ ಹಾಗೂ ಅದೇ ತರಹದ ಕೆಲಸ ಮಾಡುವ ಕಾರ್ಮಿಕರನ್ನು ಕುಶಲರಲ್ಲದ ವರ್ಗಕ್ಕೆ ಸೇರಿಸಬಹುದು.

ವಲಯ-1: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಗೊತ್ತುಪಡಿಸಿದ ಅಗ್ಲೋಮರೇಷನ್ ಪ್ರದೇಶಗಳು

ವಲಯ-2: ವಲಯ-1ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು.

ವಲಯ-3: ವಲಯ-1 ಮತ್ತು ವಲಯ-2ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು.

**ಈ. ವಿಜಯಲಕ್ಷ್ಮಿ**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಕಾರ್ಮಿಕ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿಆ) (200 ಪ್ರತಿಗಳು)